ಸಿಸಿ ನಂಃ 1969/2023

ಸಿ.ಡಬ್ಲೂ – 7

ಪಿ.ಡಬ್ಲೂ –7

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | : | ಸರಸ್ವತಿ ಎಮ್ಮೆಟ್ಟಿ |
| ತಂದೆಯ ಹೆಸರು | : | ರಾಮಪ್ಪ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಹಳ್ಳಿಗೇರಿ, . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :08-06-2026

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ಚಾಸಾ 1 ರವರು ನನ್ನ ಮಗ. ಆರೋಪಿಯ ಪರಿಚಯವಿದೆ. ಚಾಸಾಃ4, 5 ಮತ್ತು 6 ರವರ ಪರಿಚಯವಿದೆ. ಎಷ್ಟು ವರ್ಷಗಳ ಹಿಂದೆ ದೂರು ನೀಡಿದ್ದಾನೆ ಎಂದು ಗೊತ್ತಿಲ್ಲ. ಜಗಳ ಯಾರ ಮಧ್ಯೆ ಆಗಿದೆ ಎಂದು ಗೊತ್ತಿಲ್ಲ. ಜಗಳ ಬಿಡಿಸಲು ಚಾಸಾಃ1 ಹೋಗಿದ್ದರು, ಅವರಿಗೆ ಹೇಟಾಗಿರುತ್ತದೆ. ಯಾರೂ ಹೊಡೆದಿದ್ದಾರೆ ಎಂದು ಗೊತ್ತಿಲ್ಲ. ಆಗ ನಾನು ಮನೆಯಲ್ಲಿದ್ದೆ. ಜಗಳದ ನಂತರ ನಮ್ಮೂರಿನ ವಿಠಲ ಮಂದಿರದಿಂದ ಚಾಸಾಃ1 ರವರನ್ನು ಮನೆಗೆ ಕರೆದುಕೊಂಡು ಬಂದಿರುತ್ತೇನೆ. ಅವನಿಗೆ ಏನು ಆಗಿರಲಿಲ್ಲ. ಅವನನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ಉಳಿದ ವಿಷಯ ನನಗೆ ಏನು ಗೊತ್ತಿಲ್ಲ. ಪೊಲೀಸರಿಗೆ ಹೇಳಿಕೆ ನೀಡಿದ್ದೆನೆ.

ಸಿಸಿ ನಂಃ 1969/2023

ಸಿ.ಡಬ್ಲೂ – 7

ಪಿ.ಡಬ್ಲೂ –7

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 12.12.2022 ರಂದು ಮಧ್ಯಾಹ್ನ 1.30 ಕ್ಕೆ ಆರೋಪಿ ಚಾಸಾಃ1 ರವರ ಜೊತೆಗೆ ಜಗಳ ತೆಗೆದು ಅವಾಚ್ಯ ಶಬ್ದದಿಂದ ಬೈದು ಏಕಾಏಕಿ ಕಲ್ಲಿನಿಂದ ಚಾಸಾಃ1 ರವರ ತಲೆಗೆ ಕುತ್ತಿಗೆಗೆ ಹೊಡೆದ ಎಂದು ಸರಿಯಲ್ಲ. ಆಗ ನಾನು ಜಗಳ ಬಿಡಿಸಿದೆ ಎಂದರೆ ಸರಿಯಲ್ಲ. ನಂತರ ಆರೋಪಿ ಪ್ರಾಣ ಬೆದರಿಕೆ ಹಾಕಿದ್ದಃನೆ ಎಂದರೆ ಸರಿಯಲ್ಲ ಮೇಲೆ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿಃ8 ಎಂದು ಗುರುತಿಸಲಾಯಿತು. ನಿಪಿಃ8 ರಂತೆ ಹೇಳಿಕೆ ಕೊಟ್ಟಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ರವರು ಹೇಳಿದಂತೆ ನಿಪಿಃ1 ನ್ನು ಬರೆದಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಸಿಸಿ ನಂಃ 1969/2023

ಸಿ.ಡಬ್ಲೂ – 7

ಪಿ.ಡಬ್ಲೂ –7

**(ರಂಗಸ್ವಾಮಿ ಜೆ)**

4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,

ಧಾರವಾಡ.